## ನಿಮ್ಮೊಡನೆ

# ನಾಯಿಕಡಿತ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳ ಇದು ನಾವು ಎಚ್ಚರಗೊಳ್ಳಬೇಕಾದ ಸಮಯ

**ನಾಯಿಗಳ ಬಗ್ಗೆ ನಾವು ತೋರುವ ಪ್ರೀತಿ ಮತ್ತು ಅನುಕಂಪ ಅವುಗಳ ಸಹಜ ಬದುಕಿಗೆ ಧಕ್ಕೆ ಉಂಟುಮಾಡುವಂತೆ ಆಗಬಾರದು. ಕೆಲವೊಮ್ಮೆ ನಮ್ಮ ಕಾಳಜಿ–ಅನುಕಂಪ ಪ್ರಾಣಿಗಳ ಸ್ವಾತಂತ್ರ್ಯ ಹಾಗೂ ಸ್ವಾವಲಂಬನೆ ಎರಡಕ್ಕೂ ಧಕ್ಕೆ ತರುತ್ತಿರುತ್ತದೆ. ಈ ಅರಿವಿನೊಂದಿಗೆ ಪ್ರಾಣಿ ಪ್ರೀತಿಯನ್ನು ನಾವು ರೂಢಿಸಿಕೊಳ್ಳಬೇಕಾಗಿದೆ.**



ಎಐ ಚಿತ್ರ: ಈಶ್ವರ್

ವರ್ಷದಿಂದ ವರ್ಷಕ್ಕೆ ನಾಯಿ ಕಡಿತದ ಪ್ರಕರಣಗಳ ಸಂಖ್ಯೆ ರಾಜ್ಯದಲ್ಲಿ ಹೆಚ್ಚುತ್ತಲೇ ಇದೆ. ಐದು ವರ್ಷಗಳ ಅವಧಿಯಲ್ಲಿ 8.13 ಲಕ್ಷ ನಾಯಿ ಕಡಿತದ ಪ್ರಕರಣಗಳು ರಾಜ್ಯದ ವಿವಿಧ ಭಾಗಗಳಲ್ಲಿ ವರದಿಯಾಗಿರುವುದು ಆತಂಕ ಹುಟ್ಟಿಸುವ ಸಂಗತಿ. ಇಷ್ಟೊಂದು ದೊಡ್ಡ ಸಂಖ್ಯೆಯ ನಾಯಿ ಕಡಿತದ ಪ್ರಕರಣಗಳು ದಾಖಲಾಗಿದ್ದರೂ, ಇವರಲ್ಲಿ ಐವರಷ್ಟೇ ಸಾವಿಗೀಡಾಗಿರುವುದು ಸಮಾಧಾನ ತರುವ ಸಂಗತಿ.

ಈ ಮೊದಲು ನಾಯಿ ಕಡಿತದ ಪ್ರಕರಣಗಳು ಸರಿಯಾಗಿ ವರದಿಯಾಗುತ್ತಿರಲಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿನ ಹೆಚ್ಚಿನ ಪ್ರಕರಣಗಳು ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದವರ ವಿವರಗಳು ಸಮರ್ಪಕವಾಗಿ ದಾಖಲಾಗುತ್ತಿರಲಿಲ್ಲ. ಈ ಅವ್ಯವಸ್ಥೆಯನ್ನು ತಪ್ಪಿಸಲಿಕ್ಕಾಗಿ, 2021ರಲ್ಲಿ ನಾಯಿ ಕಡಿತವನ್ನು ಆರೋಗ್ಯ ಇಲಾಖೆ ‘ಘೋಷಿತ ಕಾಯಿಲೆ’ಗಳ ಪಟ್ಟಿಗೆ ಸೇರಿಸಿತು. ಇದರಿಂದಾಗಿ ನಾಯಿ ಕಡಿತದ ಪ್ರಕರಣಗಳನ್ನು ದಾಖಲಿಸುವುದು ಕಡ್ಡಾಯವಾಗಿದ್ದು, ಲೆಕ್ಕ ಸರಿಯಾಗಿ ದೊರೆಯುವುದು ಸಾಧ್ಯವಾಗಿದೆ. ನಾಯಿ ಕಡಿತಕ್ಕೊಳಗಾದವರಿಗೆ ಸಮರ್ಪಕ ಚಿಕಿತ್ಸೆ ದೊರೆಯುವಂತೆಯೂ ಆರೋಗ್ಯ ಇಲಾಖೆ ಎಚ್ಚರಿಕೆ ವಹಿಸಿದೆ. ರೇಬಿಸ್ ನಿರೋಧಕ ಲಸಿಕೆಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ನೀಡಲಾಗುತ್ತಿದೆ. ಜನರ ಜೊತೆಗೆ ನಾಯಿಗಳಿಗೂ ರೇಬಿಸ್ ಲಸಿಕೆ ನೀಡುವ ಕಾರ್ಯಕ್ರಮ ಜಾರಿಯಲ್ಲಿದೆ.

ಆರೋಗ್ಯ ಇಲಾಖೆಯ ಅಂಕಿಅಂಶಗಳ ಪ್ರಕಾರ ಎಳೆಯರಿಂದ ಹಿಡಿದು ವೃದ್ಧರವರೆಗೆ ಎಲ್ಲ ವಯೋಮಾನದವರೂ ನಾಯಿ ಕಡಿತಕ್ಕೆ ಒಳಗಾಗುತ್ತಿದ್ದಾರೆ. ನಾಯಿ ಕಡಿತದ ಪ್ರಕರಣಗಳು ಬೆಂಗಳೂರು ಮಹಾನಗರದಲ್ಲಿ ಹೆಚ್ಚಾಗಿವೆ. ಐದು ವರ್ಷಗಳ ಅವಧಿಯಲ್ಲಿ ಸುಮಾರು 76 ಸಾವಿರ ಪ್ರಕರಣಗಳು ದಾಖಲಾಗಿರುವುದನ್ನು ನೋಡಿದರೆ, ನಾಯಿ ಕಡಿತ ಮಹಾನಗರದ ಸಮಸ್ಯೆಗಳಲ್ಲೊಂದಾಗಿ ರೂಪುಗೊಂಡಿರುವುದು ಸ್ಪಷ್ಟವಾಗಿದೆ. ಬೆಂಗಳೂರನ್ನು ಹೊರತುಪಡಿಸಿದರೆ ಮಂಡ್ಯ, ಬೆಳಗಾವಿ, ಮೈಸೂರು ಜಿಲ್ಲೆಗಳಲ್ಲೂ ನಾಯಿಗಳ ಹಾವಳಿ ಹೆಚ್ಚಾಗಿದೆ.

ನಾಯಿ ಕಡಿತದ ಬಹುತೇಕ ಪ್ರಸಂಗಗಳು ಬೀದಿ ನಾಯಿಗಳಿಗೆ ಸಂಬಂಧಿಸಿದ್ದವಾಗಿರುತ್ತವೆ. ಬೆಂಗಳೂರಿನ ಕೆಲವು ಬಡಾವಣೆಗಳಲ್ಲಿ ಓಡಾಡಲು ಹೆದರುವಷ್ಟರ ಮಟ್ಟಿಗೆ ಬೀದಿ ನಾಯಿಗಳ ಹಾವಳಿಯಿದೆ. ಸಂತಾನ ನಿಯಂತ್ರಣದ ಹೊರತು ಬೇರೆ ರೀತಿಯಲ್ಲಿ ಬೀದಿ ನಾಯಿಗಳ ಬೆಳವಣಿಗೆಯನ್ನು ತಡೆಗಟ್ಟುವುದು ಸಾಧ್ಯವಿಲ್ಲದಿರುವುದೂ ಸಮಸ್ಯೆ ಉಲ್ಬಣಿಸಲು ಕಾರಣವಾಗಿದೆ. ಬೀದಿ ನಾಯಿಗಳಿಗೆ ಆಹಾರವುಣಿಸುವವರ ಸಂಖ್ಯೆ ಹೆಚ್ಚಾಗಿರುವುದೂ ಅವುಗಳ ಸಂಖ್ಯೆ ಹೆಚ್ಚಾಗಲಿಕ್ಕೆ ಕಾರಣವಾಗಿದೆ. ಆಕ್ರಮಣಕಾರಿಯಾಗಿ ವರ್ತಿಸುವ ನಾಯಿಗಳ ದಾಳಿಗೆ ಮಕ್ಕಳು, ಮಹಿಳೆಯರು ಹಾಗೂ ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಗುರಿಯಾಗುತ್ತಾರೆ.

ನಾಯಿ ಕಚ್ಚಿದಾಗ ಕೆಲವರು ನಿರ್ಲಕ್ಷ್ಯ ತೋರುವುದಿದೆ ಇಲ್ಲವೇ ಕಡಿತದಿಂದ ಉಂಟಾದ ಗಾಯವನ್ನು ಸಾಮಾನ್ಯ ಗಾಯಗಳಂತೆ ಉಪಚರಿಸುವುದಿದೆ. ಇಂಥ ನಿರ್ಲಕ್ಷ್ಯ ಅಥವಾ ಸ್ವಯಂವೈದ್ಯ ಪ್ರಾಣಾಪಾಯಕ್ಕೆ ಕಾರಣವಾಗಬಲ್ಲದು. ಹಾಗಾಗಿ, ಸಾಕುನಾಯಿ ಅಥವಾ ಬೀದಿನಾಯಿ – ಯಾವುದೇ ಆಗಿದ್ದರೂ ಅವುಗಳಿಂದ ಕಡಿತಕ್ಕೊಳಗಾದಾಗ ಉದಾಸೀನ ಮಾಡದೆ ಚಿಕಿತ್ಸೆ ಪಡೆಯುವುದು ಅಗತ್ಯ.

ಕುಟುಂಬದ ಪರಿಕಲ್ಪನೆಯಲ್ಲಿ ಆಗಿರುವ ವ್ಯತ್ಯಾಸಗಳೂ ನಾಯಿಗಳ ಬಗೆಗಿನ ಅನುಕಂಪಕ್ಕೆ ಕಾರಣವಾಗಿದೆ. ನಾಯಿಗಳನ್ನು ಸಾಕುವುದರ ಮೂಲಕ ಒಂಟಿತನಕ್ಕೆ ಉತ್ತರ ಕಂಡುಕೊಳ್ಳುವವರು, ಸಾಂಗತ್ಯದ ಅನುಭೂತಿ ಹೊಂದುವವರ ಸಂಖ್ಯೆ ನಗರ ಪ್ರದೇಶಗಳಲ್ಲಿ ಹೆಚ್ಚಾಗಿದೆ. ಶೋಕಿಗಾಗಿ ನಾಯಿಗಳನ್ನು ಸಾಕುವ ಕೆಲವರು ಅವುಗಳಿಗೆ ಖರ್ಚು ಮಾಡುವ ಮೊತ್ತದಲ್ಲಿ ಮಧ್ಯಮ ವರ್ಗದ ಕುಟುಂಬವೊಂದರ ನಿರ್ವಹಣೆಯೇ ನಡೆದುಹೋಗುತ್ತದೆ. ನಾಯಿಗಳನ್ನು ಮನೆಯಲ್ಲಿಟ್ಟುಕೊಂಡು ಸಾಕುವುದರ ಜೊತೆಗೆ, ಬೀದಿ ನಾಯಿಗಳಿಗೂ ಪ್ರೀತಿ ತೋರುವವರಿದ್ದಾರೆ. ನಾಯಿಗಳ ಬಗ್ಗೆ ಅನುಕಂಪ ತೋರುವುದನ್ನು ತಪ್ಪೆಂದು ಹೇಳಲಾಗದು. ಆದರೆ, ನಮ್ಮ ಪ್ರೀತಿ ಮತ್ತು ಅನುಕಂಪ ಯಾವುದೇ ಪ್ರಾಣಿ ಸಹಜವಾಗಿ ಆಹಾರ ಕಂಡುಕೊಳ್ಳುವುದಕ್ಕೆ ಧಕ್ಕೆ ಉಂಟು ಮಾಡುವಂತಿರಬಾರದು. ಕೆಲವೊಮ್ಮೆ ನಮ್ಮ ಕಾಳಜಿ–ಅನುಕಂಪ ಪ್ರಾಣಿಗಳ ಸ್ವಾತಂತ್ರ್ಯ ಹಾಗೂ ಸ್ವಾವಲಂಬನೆ ಎರಡಕ್ಕೂ ಧಕ್ಕೆ ತರುತ್ತಿರುತ್ತದೆ. ಈ ಅರಿವಿನೊಂದಿಗೆ ಪ್ರಾಣಿ ಪ್ರೀತಿಯನ್ನು ನಾವು ರೂಢಿಸಿಕೊಳ್ಳಬೇಕಾಗಿದೆ.

ನಾಯಿಗಳನ್ನು ಸಾಕುವವರು ತಮ್ಮ ನಾಯಿಪ್ರೀತಿ ಬೇರೊಬ್ಬರಿಗೆ ತೊಂದರೆ ಉಂಟಾಗದಂತೆ ಎಚ್ಚರವಹಿಸಬೇಕು. ನಗರಪ್ರದೇಶಗಳ ರಸ್ತೆಗಳಲ್ಲಿ ಸಂಚರಿಸುವವರು ನಾಯಿಗಳ ಮಲ–ಮೂತ್ರವನ್ನು ತುಳಿಯದಂತೆ ಎಚ್ಚರ ವಹಿಸುವ ಸ್ಥಿತಿಯಿದೆ. ಬೇರೆಯವರ ಮನೆಗಳ ಮುಂದೆ, ಉದ್ಯಾನ, ರಸ್ತೆಗಳಲ್ಲಿ ನಾಯಿಗಳು ಮಲ–ಮೂತ್ರ ಮಾಡುವಾಗ ಅವುಗಳ ಮಾಲೀಕರು ಮೂಕ ಪ್ರೇಕ್ಷಕರಂತೆ ನಿಂತಿರುವುದು ನಾಗರಿಕ ನಡವಳಿಕೆಯಲ್ಲ. ನಾಯಿಗಳಿಂದ ಉಂಟಾಗುವ ಗಲೀಜನ್ನು ತೊಡೆಯುವುದು ಅವುಗಳನ್ನು ಸಾಕಿದವರ ಕರ್ತವ್ಯವೇ ಆಗಿದೆ. ಸಾಕಿದ ನಾಯಿಗಳ ಮಲ–ಮೂತ್ರ ವಿಸರ್ಜನೆ ಅಕ್ಕಪಕ್ಕದವರೊಂದಿಗಿನ ಜಗಳಕ್ಕೆ ಕಾರಣವಾಗಿ, ಪೊಲೀಸ್ ಠಾಣೆ ಮೆಟ್ಟಿಲೇರಿದವರೂ ಇದ್ದಾರೆ. ನೆರೆಹೊರೆಯವರ ಬಗ್ಗೆ ನಿರ್ಲಕ್ಷ್ಯ ತೋರುವುದಾದರೆ, ನಮ್ಮ ಪ್ರಾಣಿಪ್ರೀತಿಗೆ ಅರ್ಥವೇ ಇಲ್ಲದಂತಾಗುತ್ತದೆ.

■ ರಘುನಾಥ ಚ.ಹ.